# ಕರ್ನಾಟಕ ವಿಧಾನ ಪರಿಷತ್ತು.

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 11 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು). |
| ಉತ್ತರಿಸಬೇಕಾದ ದಿನಾಂಕ | : | 15.02.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು. |

********

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿ 10 ವರ್ಷ ಪೂರ್ಣಗೊಂಡ ನಿವೇಶನಗಳಿಗೆ ಹಂಚಿಕೆದಾರರು ನಿಯಮಾನುಸಾರ ದಂಡ ಕಟ್ಟಲು ತಯಾರಿದ್ದರೂ ಸಹ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಶುದ್ಧ ಕ್ರಯಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿರುತ್ತದೆ. |
| ಆ | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿ 10 ವರ್ಷ ಪೂರ್ಣಗೊಂಡ ನಿವೇಶನಗಳ ಎಲ್ಲಾ ಹಂಚಿಕೆದಾರರಿಗೆ ಪ್ರಾಧಿಕಾರದಿಂದ ನಿಯಮಾನುಸಾರ ದಂಡ ಪಾವತಿಸಿಕೊಂಡು ಶುದ್ಧ ಕ್ರಯಪತ್ರ ನೀಡಲು ಸರ್ಕಾರವು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡುವುದೇ? | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 19(6)ರನ್ವಯ ಹಂಚಿಕೆದಾರರು 5 ವರ್ಷಗಳೊಳಗಾಗಿ ಅಥವಾ ಪ್ರಾಧಿಕಾರದಿಂದ ಅನುಮತಿ ಕೋರಿ ಹೆಚ್ಚಿನ ಕಾಲಾವಕಾಶ ಪಡೆದುಕೊಂಡಿರುವ ಅವಧಿಯೊಳಗೆ ಮನೆ ನಿರ್ಮಿಸಬೇಕಿದ್ದು, ಇಲ್ಲದಿದ್ದಲ್ಲಿ ಪ್ರಾಧಿಕಾರವು ನೋಟೀಸ್ ನೀಡಿ, ನಿಯಮಾನುಸಾರ ಕ್ರಮ ಕೈಗೊಂಡು ಹಂಚಿಕೆಯನ್ನು ರದ್ದುಪಡಿಸಬೇಕಿರುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 19(7)ರನ್ವಯ ಗುತ್ತಿಗೆ ಕರಾರು ಪತ್ರ ಮಾಡಿಕೊಂಡ 10 ವರ್ಷಗಳು ಕಳೆದ ನಂತರ ಹಂಚಿಕೆಯನ್ನು ರದ್ದುಪಡಿಸದಿದ್ದಲ್ಲಿ ಪ್ರಾಧಿಕಾರವು ಹಂಚಿಕೆದಾರರಿಗೆ ಕ್ರಯಪತ್ರವನ್ನು ಮಾಡಿಕೊಡಬೇಕಾಗಿರುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 165 ಬೆಮಪ್ರಾ 2012, ದಿನಾಂಕ: 20.03.2013 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ತಿದ್ದುಪಡಿ ನಿಯಮಗಳು, 2012 ನ್ನು ಅಧಿಸೂಚಿಸಲಾಗಿದ್ದು, ಇದರಲ್ಲಿ ನಿಯಮ (20) ಕ್ಕೆ ಒಂದು ಬಾರಿಯ ಕ್ರಮವಾಗಿ ತಿದ್ದುಪಡಿ ತರಲಾಗಿದ್ದು, ನಿಯಮಗಳು ಜಾರಿಗೆ ಬಂದ ದಿನಾಂಕದಿಂದ 2005ರ ಪೂರ್ವದಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಮಾತ್ರ ಅನ್ವಯಿಸುತ್ತದೆ. ಸದರಿ ತಿದ್ದುಪಡಿ ನಿಯಮಗಳಲ್ಲಿ ಹಂಚಿಕೆದಾರರು 10 ವರ್ಷದ ಗುತ್ತಿಗೆ ಅವಧಿಯೊಳಗೆ ಅಥವಾ ಪೂರ್ಣಗೊಂಡ ನಂತರ ಮನೆಯನ್ನು ನಿರ್ಮಿಸಿ / ನಿರ್ಮಿಸದೇ ಕ್ರಯ ಪತ್ರ ಪಡೆಯದೇ ನೇರ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ನೋಂದಣಿ ಬೆಲೆಯ ಶೇ 25ರಷ್ಟು ದಂಡ ಶುಲ್ಕವನ್ನು ಪಾವತಿಸಿಕೊಂಡು ಕ್ರಯಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| | | 2005ನೇ ಸಾಲಿನಲ್ಲಿ ಹಾಗೂ ನಂತರದ ಅವಧಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾಗಿ 10 ವರ್ಷ ಪೂರ್ಣಗೊಂಡ ನಿವೇಶನಗಳ ಹಂಚಿಕೆದಾರರ ನಿವೇಶನಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 165 ಬೆಮಪ್ರಾ 2012, ದಿನಾಂಕ: 20.03.2013 ರ ಅಂಶಗಳನ್ವಯ ಕ್ರಯಪತ್ರ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

ಸಂಖ್ಯೆ: ನಅಇ 42 ಮೈಅಪ್ರಾ 2022 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**